ಈ ಯೋಜನೆಯಲ್ಲಿ ಬರುವ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿ ಅನುಮೋದನೆ ಪಡೆಯಲಾಗುವುದು.

* 5 ಕಿ.ಮೀ. ವ್ಯಾಪ್ತಿಯೊಳಗೆ ಸರ್ಕಾರಿ ಹಾಗೂ ಅನುದಾನಿತ ಪ್ರೌಢಶಾಲೆಗಳು ಇರಬಾರದು.

* 8ನೇ ತರಗತಿ ಹೊಂದಿರುವ ಹಿರಿಯ ಪ್ರಾಥಮಿಕ ಶಾಲೆಗಳನ್ನು ಮಾತ್ರ 9ನೇ ತರಗತಿಯೊಂದಿಗೆ ಉನ್ನತೀಕರಿಸಲು ಅವಕಾಶವಿರುತ್ತದೆ.

* 9ನೇ ತರಗತಿಗೆ 70 ಮಕ್ಕಳು ದಾಖಲಾಗುವಂತಿರಬೇಕು.

* ಶೈಕ್ಷಣಿಕವಾಗಿ ಹಿಂದುಳಿದ ಬ್ಲಾಕುಗಳ ಶಾಲೆಗಳಲ್ಲಿ / ಮೈನಾರಿಟಿ ಶಾಲೆಗಳಲ್ಲಿ ಕನಿಷ್ಠ 50 ಮಕ್ಕಳು ದಾಖಲಾಗುವಂತಿರಬೇಕು.

* ಕಟ್ಟಡ ನಿರ್ಮಾಣಕ್ಕೆ ಅವಶ್ಯ ನಿವೇಶನ ಇರಬೇಕು.

ಈ ನಿಯಮಗಳನ್ನು ಅನುಸರಿಸಿ ಜಿಲ್ಲಾ ಉಪ ನಿರ್ದೇಶಕರು 2012–13ನೇ ಸಾಲಿಗೆ ಪ್ರಸ್ತಾವನೆ ಸಲ್ಲಿಸಬೇಕಾಗಿದ್ದು ಪ್ರಸ್ತಾವನೆಗಳು ಬಂದ ನಂತರ ಕೇಂದ್ರ ಸರ್ಕಾರದ ಅನುಮೋದನೆಗೆ ಸಲ್ಲಿಸಲಾಗುವುದು.

ಇ) ಪ್ರೌಢ ಶಾಲೆಗಳಿಗೆ ಸಂಬಂಧಿಸಿದಂತೆ 2011–12ನೇ ಸಾಲಿನ ವಾರ್ಷಿಕ ಯೋಜನೆಯಲ್ಲಿ ಅಡವಿಸೋಮನಾಳ, ಬಂಟನೂರ, ಬಳವಟ ಮತ್ತು ಯರಜರಿ ಶಾಲೆಗಳ ಉನ್ನತೀಕರಣ ಕೋರಿ ಕೇಂದ್ರ ಸರ್ಕಾರ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.

ಖಾಸಗಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ವೇಳೆ ಪೋಷಕರ ಸಂದರ್ಶನ

136 : (284)

ಶ್ರೀ ನೆ.ಲ. ನರೇಂದ್ರ ಬಾಬು (ಮಹಾಲಕ್ಷ್ಮಿ ಲೇಔಟ್)

ಅ) ಖಾಸಗಿ ಶಾಲೆಗಳಲ್ಲಿ ಮಕ್ಕಳನ್ನು ಸೇರಿಸುವಾಗ ತಂದೆ / ತಾಯಿಯವರುಗಳಿಗೆ ಸಂದರ್ಶನ / ಪರೀಕ್ಷೆಗಳನ್ನು ನಡೆಸುವುದು ಮಾತ್ರವಲ್ಲದೆ ಪದವಿಯಾಗಿರಬೇಕು ಉತ್ತಮ ಕಂಪನಿಯಗಳಲ್ಲಿಯೇ ಕಾರ್ಯನಿರ್ವಹಿಸಬೇಕು ಎಂದೆಲ್ಲಾ ನಿಯಮಗಳನ್ನು ವಿಧಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಇವುಗಳನ್ನು ನಿಯಂತ್ರಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ;

ಇ) ಕಾನೂನುಬಾಹಿರವಾಗಿ ಶಾಲೆಗಳನ್ನು ನಡೆಸುವ ಎಷ್ಟು ಶಾಲೆಗಳಿಗೆ ಸರ್ಕಾರ ಅನುದಾನ ಕಡಿತ ಮಾಡಿ ಶಾಲೆಗಳ ಮಾಲೀಕರುಗಳಿಗೆ ಶಿಕ್ಷೆ ನೀಡಿದೆ;

ಈ) ಇಂತಹ ಶಾಲೆಗಳಿಗೆ ಅನುದಾನ ನೀಡದೇ ಇದ್ದಲ್ಲಿ ಶಾಲೆಯ ಮಾಲೀಕರು ತಮ್ಮಿಷ್ಟಕ್ಕೆ ತಕ್ಕಂತೆ ನಿಯಮಗಳನ್ನು ವಿಧಿಸಲು ಕಾನೂನಿನಲ್ಲಿ ಅವಕಾಶವಿದೆಯೇ;

ಉ) ಶಾಲೆಗಳಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಪೋಷಕರುಗಳಿಂದ ಹಣ ವಸೂಲಿ ಮಾಡುತ್ತಿರುವ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕಠಿಣ ಕ್ರಮಗಳೇನು; ಇಂತಹ ಎಷ್ಟು ಪ್ರಕರಣ ಬೆಳಕಿಗೆ ಬಂದಿದೆ(ವಿವರನೀಡುವುದು) ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಬಂದಿಲ್ಲ.

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಈ) ಇಲ್ಲ.

ಉ) ಬೆಂಗಳೂರು ಉತ್ತರ ಜಿಲ್ಲೆಗೆ ಸಂಬಂಧಿಸಿದಂತೆ, ಗುಡ್‌ವಿಲ್ ಪ್ರೌಢಶಾಲೆ, ಕೋಲ್ಸ್ ಪಾರ್ಕ್ ರಸ್ತೆ, ಶಿವಾಜಿನಗರ, ಬೆಂಗಳೂರು ಮತ್ತು ವಿ.ಎಂ.ಎಸ್. ಆಂಗ್ಲ ಶಾಲೆ, ಸೆಂಟ್ ಜಾನ್ಸ್ ರಸ್ತೆ, ಬೆಂಗಳೂರು, ಈ ಶಾಲೆಗಳ ಬಗ್ಗೆ ಬಂದ ದೂರಿನ ಹಿನ್ನೆಲೆಯಲ್ಲಿ ಸಂಬಂಧಿಸಿದ ಉಪ ನಿರ್ದೇಶಕರ ಕಛೇರಿಯಿಂದ ವಿವರಣೆ ಕೇಳಿ ನೋಟೀಸ್ ಜಾರಿ ಮಾಡಿದೆ. ಕರ್ನಾಟಕ ಶಿಕ್ಷಣ ಸಂಸ್ಥೆಗಳು (ವರ್ಗೀಕರಣ, ನಿಯಂತ್ರಣ, ಪಠ್ಯವಸ್ತು ನಿಗದೀಕರಣ, ಇತರೆ) 1995 ರ ನಿಯಮ 16ರಂತೆ ಉಪ ನಿರ್ದೇಶಕರಿಗೆ ಕ್ರಮವಹಿಸಲು ತಿಳಿಸಲಾಗಿದೆ.

ಕರ್ನಾಟಕ ಶಿಕ್ಷಣ ಕಾಯಿದೆಯ ಕರ್ನಾಟಕ ಶಿಕ್ಷಣ ಸಂಸ್ಥೆಗಳ (Classification, Regulation Etc.) Rules 1995 ರ ನಿಯಮ, 16ರಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಸಮಿತಿಯನ್ನು ರಚಿಸಿದ್ದು, ಯಾವುದೇ ಸಂಸ್ಥೆಯು ನಿಯಮಬಾಹಿರವಾಗಿ ವಂತಿಗೆಯನ್ನು ವಸೂಲಿ ಮಾಡಿದಲ್ಲಿ ಅವರಿಗೆ ದೂರನ್ನು ನೀಡಬಹುದು ಮತ್ತು ಜಿಲ್ಲಾಧಿಕಾರಿಗಳ ಸೂಕ್ತ ಕ್ರಮ ತೆಗೆದುಕೊಳ್ಳಲು ಅವಕಾಶವಿರುತ್ತದೆ.

ಕೇಂದ್ರ ಸರ್ಕಾರದ ಶಿಕ್ಷಣ ಕಾಯಿದೆ ಹಕ್ಕನ್ನು 2009 ರಲ್ಲಿ ತಂದಿದ್ದು. ಈ ಕಾಯಿದೆಯು 1–4–2010 ರಿಂದ ಜಾರಿಯಲ್ಲಿರುತ್ತದೆ. ಈ ಕಾಯಿದೆಗೆ ನಿಯಮಾವಳಿಗಳನ್ನು ರೂಪಿಸಲಾಗುತ್ತಿದ್ದು, ಈ ನಿಯಮಗಳಲ್ಲಿಯೂ ಸಹ ವಂತಿಗೆ ವಸೂಲು ನಿಷೇಧ ಮಾಡುವ ಬಗ್ಗೆ ನಿಯಮಗಳನ್ನು ರೂಪಿಸಲಾಗುತ್ತದೆ.